**ಸಾಕ್ಷಿಗೆ ದಿನಾಂಕಃ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ.ಆರ್.ಬಿ. ವಕೀಲರಿಂದಃ**

1) **2** ನೇ ಎದುರುದಾರ ಸಂಸ್ಥೆಯಲ್ಲಿ ನಾನು ಕಾನೂನು ವ್ಯವಸ್ಥಾಪಕನಾಗಿ ಕರ್ತವ್ಯ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ. ನನ್ನ ಹೇಳಿಕೆಗೆ ಸರಿಯಾಗಿ ನಮ್ಮ ವಕೀಲರು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿದ್ದಾರೆ.

2) ಅನುಮತಿ ಪತ್ರವನ್ನು ನಿ.ಆರ್.**1** ಎಂದು, ಮತ್ತು ಕೆಎ-51-ಹೆಚ್.ಎಂ-4841 ಸಂಖ್ಯೆಯ ದ್ವಿಚಕ್ರ ವಾಹನಕ್ಕೆ ನೀಡಿರುವಂತಹ ವಿಮಾ ಪಾಲಿಸಿಯನ್ನು ನಿ.ಆರ್.**2** ಎಂದು ಗುರುತಿಸಿದೆ.

3) **Bundled Policy** ಅನ್ನು ನೀಡಿದಾಗ ಅದಕ್ಕೆ ಯಾವ ಯಾವ ನಿಯಮಗಳು ಅನ್ವಯವಾಗುತ್ತದೆ ಎಂಬ ಬಗ್ಗೆ ನಮ್ಮ ವಿಮಾ ಸಂಸ್ಥೆಯಿಂದ ಹೊರಡಿಸಿದ **Policy wording** ಎಂಬ ನಿಯಮಾವಳಿಗಳನ್ನು ನಿ.ಆರ್.**3** ಎಂದು ಗುರುತಿಸಿದೆ.

4) **Liability only policy** ಗೆ ಸಂಬಂಧಿಸಿದಂತೆ ಇರುವಂತಹ

ನಿಯಮಾವಳಿಗಳನ್ನು ನಿ.ಆರ್.**4** ಎಂದು ಗುರುತಿಸಿದೆ.

5) ಶ್ರೀಮತಿ ಸುಜಾತ ರವರಿಗೆ ನೀಡಿರುವಂತಹ ನೋಟೀಸಿನ ಕಛೇರಿ ನಕಲನ್ನು ನಿ.ಆರ್.**5** ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿ.ಆರ್.**6** ಎಂದು, ಮತ್ತು ಅಂಚೆ ಇಲಾಖೆಯವರು ನೀಡಿರುವ ರಶೀದಿಯನ್ನು ನಿ.ಆರ್.**7** ಎಂದು ಗುರುತಿಸಿದೆ.

6) ಆರೋಪಿ ಪ್ರೇಮ್ ಕುಮಾರ್ ರವರಿಗೆ ನೀಡಿರುವ ನೋಟಿಸಿನ ಪ್ರತಿಯನ್ನು ನಿ.ಆರ್.**8** ಎಂದು ಮತ್ತು ಅಂಚೆ ಇಲಾಖೆಯವರು ನೀಡಿರುವ ಮತ್ತೊಂದು ಅಂಚೆ ಸ್ವೀಕೃತಿಯನ್ನು ನಿ.ಆರ್.**9** ಎಂದು ಮತ್ತು ಪ್ರೇಮ್ ಕುಮಾರ್ ರವರಿಗೆ ಕಳುಹಿಸಿರುವ ನೋಟೀಸು ಜಾರಿ ಆಗದೇ ವಾಪಸ್ಸು ಬಂದಿದೆ ಸದರಿ ಅಂಚೆ ಕವರ್ ಅನ್ನು ನಿ.ಆರ್.**10** ಎಂದು ಗುರುತಿಸಿದೆ.

7) ಆದ ಕಾರಣದಿಂದ ನಮ್ಮ ವಿರುದ್ಧ ಈ ಪ್ರಕರಣವನ್ನು ವಜಾ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಗಿದೆ</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.